"ಈಗ ಸುಮ್ಮನೇ ಕುಳಿತುಕೋ." ಹುಡುಗ ಗದರಿದ. ಅವನ ಕೈ ಬೇಗ ಬೇಗ ಡ್ರಿಯೋಲಿಯ ಬೆನ್ನ ಮೇಲೆ ಆಡತೊಡಗಿತು.

ಮುಂದೆ ಟ್ಯಾಟೂ ಮಾಡುವುದಿದ್ದರೆ ತೊಂದರೆಯಾಗಬಾರದೆಂದು ಅವನು ಬಣ್ಣವನ್ನು ಆದಷ್ಟು ತೆಳುವಾಗಿಸಿದ್ದ. ಅವನು ಚಿತ್ರ ಬಿಡಿಸುವುದರೊಳಗೆ ಎಷ್ಟೊಂದು ಗಾಢವಾಗಿ ತೊಡಗಿಸಿಕೊಂಡಿದ್ದನೆಂದರೆ ನಶೆ, ಜೋಸಿ ಮತ್ತು ಡ್ರಿಯೋಲಿಯನ್ನು ಸಂಪೂರ್ಣವಾಗಿ ಮರೆತುಬಿಟ್ಟಿದ್ದ. ಅರ್ಧಗಂಟೆಯಲ್ಲಿ ಅವನ ಕೆಲಸ ಮುಗಿಯಿತು.

ಚಿತ್ರವನ್ನು ನೋಡಿ ಹುಡುಗನಿಗೆ ತೃಪ್ತಿಯಾಯಿತು.

"ನೀನೀಗ ಮಾಮೂಲು ಭಂಗಿಗೆ ಹಿಂದಿರುಗಬಹುದು." ಎಂದು ಜೋಸಿಗೆ ಹೇಳಿದ್ದೇ ತಡ ಅವಳು ಸೋಫಾದ ಮೇಲೆ ಬಿದ್ದು, ತಕ್ಷಣ ನಿದ್ದೆ ಹೋದಳು.

ಹುಡುಗ ಟ್ಯಾಟೂ ಮಶೀನನ್ನು ಕೈಗೆತ್ತಿಕೊಂಡ. ಸೂಜಿಯನ್ನು ಬಣ್ಣದ ಶಾಯಿಯೊಳಗೆ ಅದ್ದಿ ಅದ್ದಿ ಡ್ರಿಯೋಲಿಯ ಬೆನ್ನ ಮೇಲೆ ಟ್ಯಾಟೂ ಮಾಡತೊಡಗಿದ. ಟ್ಯಾಟೂ ಮಾಡುವುದು ಅವನಿಗೆ ವಿಶೇಷ ಕಷ್ಟವೆನಿಸಲಿಲ್ಲ. ಅಲ್ಲದೆ, ನಿದ್ದೆ ಹೋಗಲು ಹಾತೊರೆಯುತ್ತಿದ್ದ ಅವನ ಶರೀರ ಈಗ ಜಾಗೃತವಾಗಿತ್ತು. ಹುಡುಗ ವಿವಿಧ ಬಣ್ಣದ ಶಾಯಿಗಳನ್ನು ಬಳಸುತ್ತಿರುವುದು ಡ್ರಿಯೋಲಿಗೆ ಗೊತ್ತಾಗುತ್ತಿತ್ತು. ಅವನ ಬೆನ್ನ ಮೇಲೆ ಮೂಡುತ್ತಿದ್ದ ಚಿತ್ರವನ್ನು ಅವನು ಕಲ್ಪಿಸತೊಡಗಿದ. ಹುಡುಗ ಒಬ್ಬ ನುರಿತ ಟ್ಯಾಟೂಯಿಸ್ಟ್ ಥರ ಸೂಜಿ ಮಶೀನನ್ನು ಆಡಿಸುತ್ತಿರುವುದು ಅವನಿಗೆ ಅನುಭವವಾಗತೊಡಗಿತು. ಈ ಹೊಸ ಮಾಧ್ಯಮ ಅವನನ್ನು ಸಮ್ಮೋಹನಗೊಳಿಸಿದಂತಿತ್ತು.

ನಸುಕಿನವರೆಗೂ ಟ್ಯಾಟೂ ಮಶೀನಿನಿಂದ ಜೀರುಂಡೆ ಶಬ್ದ ಕೊರೆಯುತ್ತಲೇ ಇತ್ತು. ''ಓಹ್!... ಮುಗಿಸಿದೆ!" ಎಂದು ಹುಡುಗ ನಿಟ್ಟುಸಿರು ಬಿಟ್ಟು ಮಶೀನು ಕೆಳಗಿಟ್ಟಾಗ ಡ್ರಿಯೋಲಿ ಕಿಟಕಿಯ ಕಡೆಗೆ ನೋಡಿದ. ಪೂರ್ವದಲ್ಲಿ ಮಂದ ಬೆಳಕು ಮೂಡುತ್ತಿತ್ತು. ಜನರು ರಸ್ತೆಯಲ್ಲಿ ಆಗಲೇ ಓಡಾಡಲು ಶುರುವಿಟ್ಟುಕೊಂಡಿದ್ದರು.

"ನನಗೆ ನೋಡಬೇಕು!" ಡ್ರಿಯೋಲಿ ಹೇಳಿದ.

